ಕೂಸಾದದ್ದಕ್ಕೆ ಎನಗನಿಸಿದ್ದ ಹೇಳ್ತೆ. ಒಬ್ಬನೇ ಇಲ್ಲಿ ಜೀವನ ಮಾಡೂದು ಕಷ್ಟವಪ್ಪ. ಪ್ಯಾಟೆ ಜೀವನಾ ಸಸಾರೇನೂ ಅಲ್ಲ. ಮಗ್ಳ ಮದ್ವೆಯೊ ನೌಕರಿಯೊ ಆದ್ಮೇಲೆ ಪ್ಯಾಟೆ ಬಿಡಾರ್ದಲ್ಲಿ ದಿನ ಹ್ಯಾಂಗೆ ಕಳೀತೆ? ಎಷ್ಟೆಲ್ಲ ಕಾಲ್ದಿಂದ ಹರಿಗದ್ದೆ ಮನೆತನದವು ಇಲ್ಲಿ ಸಂಸಾರ ಮಾಡಿದ್ರೊ ಅಲ್ದನೆ ಅಬ್ಬೆ. ಕಷ್ಟಸುಕ ಹೇಳ್ಕಂಬುದಕ್ಕೆ ತಾಯಿ ಮನೆ ಅಂಬೂದೊಂದು ಹೆಣ್ಣ ಜೀವಕ್ಕೆ ಯಾವೊತ್ತೂ ಬೇಕಾವ್ದು. ಮನೆ ಪರಬಾರೆ ಮಾಡಿ ಹೋದ್ರೆ ಎನ್ನ ಹೆತ್ತ ಕರಳು ಬಳ್ಳಿ ಕತ್ರಸ್ದಾಂಗೆಯಾ. ತವರು ಮನೆ ಇಲ್ಲೆ ಹೇಳಿ ಕಲ್ಪನೆ ಮಾಡ್ಕಂಬುದಕ್ಕೂ ಸಾಧ್ಯಿಲ್ಲೆ. ಜೀವನ ಪರ್ಯಂತ ಅಬ್ಬೆ ಮನೆ ದಾರಿ ಕಡೆ ಮೊಕ ಹಾಕ್ಲಾಗ ಅಂದ್ರೆ ಎಂಥ ಸಂಕ್ಟ!" ಎಂದು ಗದ್ಗಿತಳಾಗಿ ಪಡಿ ಮಾಡಿನ ಚಿಟ್ಟೆಯ ತುದಿಗೆ ಬಂದು ಹಿತ್ತಲಿಗೆ ಎದುರಾಗಿ ಬಿಕ್ಕಿದಳು. ತಂಗಾಳಿಬೆಳದಿಂಗಳ ಲೀಲೆ ನಡೆದಿತ್ತು. ಸಣ್ಣದ್ದಾಗ ಅಪ್ಪ ಬರೀ ಕಚ್ಚೆಪಂಜೀಲಿ ಕುಳಿ ತೋಡಿ ತೆಂಗಿನ ಗಿಡ ನೆಟ್ಟಿದ್ದು ನೆನಪಾಯಿತು. ದಿನಾ ಮಧ್ಯಾಹ್ನ ಮತ್ತೆ ರಾತ್ರಿ ಗಿಡದ ಬುಡಕೇ ಎಂಜಲು ಕೈ ತೊಳೆಯುವಂತೆ ತಾಕೀತು ಮಾಡಿದ್ದ. ಆ ಗಿಡ ಎಲ್ಲೆಂದು ದೇವಕಿ ನೋಡಿದಳು – ಬಚ್ಚಲ ನೀರು ಹರಿದು ಒದ್ದೆಯಾದ ಜಾಗದಲ್ಲಿ ನಿಂತ ಲಿಂಬೆ ಗಿಡ; ಅದರಾಚೆ ಬೂದಿ ರಾಶಿಯ ಬಸಳೆ ಚಪ್ಪರ; ಪಕ್ಕದಲ್ಲಿ ಬಿಳಿ ಹುಲ್ಲುಕಾಯಿ ಸಿಪ್ಪೆ ಹಾಕಿದ ಕುಂಟು ಗೋಡೆಯ ಸೌದೆ ಕೊಟ್ಟಿಗೆ; ಸತ್ತು ಹೋಯಿತೆ, ಮಳೆ ಗಾಳಿಗೆ ಉರುಳಿ ಹೋಯಿತೆ ಎಂದೆಲ್ಲ ಯೋಚನೆಯಾಯಿತು. ಬಿಡಿಸಿದ ಛತ್ರಿಯಂಥ ನೆರಳು ದುಂಡಗೆ ಹರಿದು ಬಿದ್ದಿತ್ತು; ನೆರಳಿನ ನೆಯ್ಗೆಯಲ್ಲಿ ನಿಂತು ನೋಡಿದಳು. ಮಾಡು ದಾಟಿ, ಕೋಳು ಮೀರಿ ಮರ ಆಕಾಶ ಹತ್ತಿ ಹೋಗಿದೆ. ಕಾಲದ ಏಣಿ ಏರಿ ಎತ್ತರಕ್ಕೆ ನಿಂತ ಅದರ ಪ್ರಾಯಕ್ಕೆ ದಿಗಿಲಾಯಿತು. ನಿನಗೂ ವಯಸ್ಸಾಯಿತೆಂದು ಇರುಳಿನ ಸಂಧಿಯಲ್ಲಿ ಅದು ಪಿಸುಗುಟ್ಟಿದಂತೆ ಕೇಳಿಸಿತು. ಅದು ಬರಿ ಮರವಲ್ಲ; ತಾನು ಮಗ್ಗಿ ಬಾಯಿ ಪಾಠ ಮಾಡಿದ್ದನ್ನು ಅದು ಕೇಳಿದೆ; ಬಿದ್ದ ಹಾಲು ಹಲ್ಲು ಅದರ ಬೇರಿನಡಿಯಲ್ಲಿದೆ. ಕದ್ದು ಬೆಣ್ಣೆ ತಿಂದಾಗ ಹಿಡಿಮುಂಡಲ್ಲಿ ಅಬ್ಬೆ ಹೊಡೆದಾಗ ಅಪ್ಪಿಕೊಳ್ಳಲು ಮೈ ಕೊಟ್ಟು ಸಂತೈಸಿದ್ದು ಅದೇ. ಸಂಜೆ ಅಬ್ಬಲಿಗೆ ದಂಡೆ ಕಟ್ಟಿ ರಾತ್ರಿಯೆಲ್ಲ ಇಬ್ಬನಿಗೆ ಅರಳಲು ತನ್ನ ಗರಿಯ ಮೇಲೆ ಮಲಗಿಸಿಕೊಂಡ ತೊಟ್ಟಿಲದು; ಅದರ ಬುಡದಲ್ಲಿ ಕೂತಾಗ ಮೊದಲ ಸಲ ಲಂಗದ ಮೇಲೆ ರಕ್ತದ ಕಲೆಯಾಗಿ ನಾಚಿದ್ದನ್ನು ನೋಡಿದ್ದು ಅದೇ; ಬಾಳ ಸಂಗಾತಿ ಮೊದಲ ಸಲ ನೋಡಿ ಮುಗಳ್ನಕ್ಕದ್ದು ಮರದ ಮರೆಯಲ್ಲೆ. ಮೊದಲ ಮಿಲನವನ್ನು ಅಟ್ಟದ ಕಿಟಕಿಯಿಂದ ಚಂದ್ರನ ಬೆಳಕು ಬಿಟ್ಟು ಅದು ನೋಡಿದ ಸಂಶಯ. ತನ್ನ ಗರಿಯ ನೆರಳಿಂದ ಹಿತವಾಗಿ ಬೆವರಿ ತಣಿದ ಮಿಲನೋತ್ಸವದ ಜೀವವನ್ನು ಅಮೃತ ಸ್ಪರ್ಶದಿಂದ ಸವರಿದ ನೆನಪು; ಮದುವೆಯ ಮರುದಿನ ಹೊರಟವಳ ಮಡಿಲನ್ನು ಅದರ ಫಲವಿಟ್ಟು ತುಂಬಿದ್ದರು. ನನ್ನ ಜತೆಯಲ್ಲೆ ಬೆಳೆದ ಸಖಿ. ಮನೆಯಲ್ಲಿ ಜಗಳವಾದರೂ ಅದು ಮಾತ್ರ ಎತ್ತರಕ್ಕೆ ಗಾಳಿಯ ನಡುವೆ ಶಾಂತಿ, ಸಮಾಧಾನ ಎಂದು ನಗುವವಳು. ಮಾಲತಿ ಹಿಂದೆ ಬಂದು ನಿಂತಂತೆ ಭಾಸವಾಯಿತು. "ಇಲ್ಲಿಗೆ ಯಾರೇ ಬರ್ಲಿ. ಈ ಮರ ಮಾತ್ರ ಹೀಂಗೇ ಇರ್ಲಿ ದ್ಯಾವ್ರೆ. ವರ್ಷಕ್ಕೊಂದು ಸರ್ತಿ ಬಂದು ಈ ಮರವೇ ಎನ್ನ ತವರು, ಕುಲ ದ್ಯಾವ್ರು ಎಂದ್ಕಂಡು ಕೈ ಮುಕ್ಕಂಡು ಹೋದ್ರಾತು" ಎನ್ನುತ್ತ ಕಣ್ಣೊರೆಸಿಕೊಂಡಳು.

ಜಗಲಿಗೆ ಮರಳಿದ ದೇವಕಿಯ ಮಾತು ಮುಂದೊರೆಯಿತು. "ಅಬೆ ನೀನು ಚಿಂತೆ ಮಾಡಡ. ಎನ್ನ ಮನ್ಗೆ ಬಂದು ಉಳ್ಕಾ. ನಿನ್ನ ಕರ್ಕಂಡು ಹೋಪುದಕ್ಕೆ ಆನು ಬಂದದ್ದು" ಎಂದಳು.

ಪುಟ್ಟತ್ತೆ ಮಾತಾಡಲಿಲ್ಲ. ಅವಳಿಗೆಲ್ಲಿದೆ ಆಯ್ಕೆ. ಈ ಮುದಿಗಾಲದಲ್ಲಿ ನಿಶ್ಚಿತ ನೆಲೆ ಇಲ್ಲದೆ ಅಲೆಯುವ ವಿಚಾರಕ್ಕೆ ಅವಳು ಬಳಲಿಹೋಗಿದ್ದಳು. ತನ್ನದೆಂಬ ಖಾಸಗಿ ಬದುಕು, ಸ್ವಂತದ್ದು